# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 473**
**ಸದಸ್ಯರ ಹೆಸರು : ಶ್ರೀ ಎನ್ ರವಿಕುಮಾರ್**
**ಉತ್ತರಿಸುವ ದಿನಾಂಕ : 11.12.2025**
**ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 2 ವರ್ಷಗಳಲ್ಲಿ ತುಂಗಭದ್ರಾ ಡ್ಯಾಂ ಕ್ರಸ್ಟ್ ಗೇಟ್‌ಗಳ ನಿರ್ವಹಣೆಗೆ ಎಷ್ಟು ಮೊತ್ತ ವೆಚ್ಚ ಮಾಡಲಾಗಿದೆ: ದುರಸ್ಥಿಯಲ್ಲಿರುವ ಡ್ಯಾಂ ಕ್ರಸ್ಟ್ ಗೇಟ್ ಗಳ ಸಂಖ್ಯೆ ಎಷ್ಟು: ಎಷ್ಟು ಕ್ರಸ್ಟ್ ಗೇಟ್‌ಗಳನ್ನು ತುರ್ತಾಗಿ ಬದಲಿಸಬೇಕಾಗಿದೆ: (ವಿವರ ನೀಡುವುದು) | ಕಳೆದ 2 ವರ್ಷಗಳಲ್ಲಿ ತುಂಗಭದ್ರಾ ಡ್ಯಾಂ ಕ್ರಸ್ಟ್ ಗೇಟ್‌ಗಳ ನಿರ್ವಹಣೆಗೆ ತುಂಗಭದ್ರಾ ಮಂಡಳಿಯಿಂದ ರೂ.27.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.<br><br>ತುಂಗಭದ್ರಾ ಅಣೆಕಟ್ಟೆಯ ಎಲ್ಲಾ ಗೇಟುಗಳ comprehensive health checkup ಕೈಗೊಳ್ಳಲಾಗಿದ್ದು, ಸದರಿ ವರದಿಯನ್ವಯ ಪರಿಣಿತರುಗಳ ಅಭಿಪ್ರಾಯ ಪಡೆದು, ಎಲ್ಲಾ 33 ಗೇಟುಗಳ ಬದಲಾವಣೆಗೆ ತೀರ್ಮಾನ ಕೈಗೊಳ್ಳಲಾಗಿದೆ. |
| ಆ) | ಡ್ಯಾಂ ಕ್ರಸ್ಟ್ ಗೇಟ್‌ಗಳ ದುರಸ್ತಿಯನ್ನು ಮುಂದಿಟ್ಟುಕೊಂಡು ರೈತರ ಬೆಳೆಗಳಿಗೆ ನೀರು ಬಿಡದಿರುವ ಕುರಿತು ಸರ್ಕಾರದ ನಿಲುವೇನು: ಒಂದು ಬೆಳೆಗೆ ಮಾತ್ರವೇ ನೀರು ಬಿಡುವುದಾಗಿ ತಿಳಿಸಿರುವುದರಿಂದ ಸಂಕಷ್ಟಕ್ಕೊಳಗಾದ ರೈತರ ನೆರವಿಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಪ್ರಸ್ತುತ, ಅಣೆಕಟ್ಟೆಯ ಎಲ್ಲಾ ಗೇಟುಗಳ ಬದಲಾವಣೆಗೆ ಟೆಂಡರ್ ವಹಿಸಲಾಗಿದ್ದು, ಗೇಟುಗಳ fabrication & allied works ಪ್ರಗತಿಯಲ್ಲಿದೆ. ಅಣೆಕಟ್ಟೆಯಲ್ಲಿ ನೀರಿನ ಸಂಗ್ರಹಣೆ 1613 ಅಡಿಗೆ ತಲುಪಿದ ಕೂಡಲೇ ಗೇಟುಗಳ ಅಳವಡಿಕೆ ಕಾಮಗಾರಿ ಪ್ರಾರಂಭಿಸಿ, ಜೂನ್-2026ರೊಳಗಾಗಿ ಪೂರ್ಣಗೊಳಿಸಲು ಯೋಜಿಸಲಾಗಿದೆ.<br><br>ಪ್ರಸಕ್ತ 2025-26ನೇ ಜಲ ವರ್ಷದಲ್ಲಿ ಗೇಟುಗಳ ಅಳವಡಿಕೆ ಕಾಮಗಾರಿಗಳ ಅನುಷ್ಠಾನ ಪ್ರಯುಕ್ತ ಹಾಗೂ ಅಣೆಕಟ್ಟೆಯ ಸುರಕ್ಷತೆಯ ದೃಷ್ಟಿಯಿಂದ ಜಲಾಶಯದಲ್ಲಿ ನೀರಿನ ಸಂಗ್ರಹಣೆಯ ಮಟ್ಟವನ್ನು FRL 1633 ft ಗೆ ಬದಲಾಗಿ 1626 ಅಡಿಗೆ ಅಂದರೆ 80 ಟಿಎಂಸಿ ನೀರಿನ ಸಂಗ್ರಹಣೆಗೆ ಸೀಮಿತಗೊಳಿಸಲಾಗಿದೆ. ಈ ಹಿನ್ನೆಲೆಯಲ್ಲಿ, ದಿನಾಂಕ:14.11.2025ರಂದು ಮಾನ್ಯ ಉಪ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಜರುಗಿದ ತುಂಗಭದ್ರಾ ಯೋಜನೆಯ ನೀರಾವರಿ ಸಲಹಾ ಸಮಿತಿಯ 125ನೇ ಸಭೆಯಲ್ಲಿ ಹಿಂಗಾರು ಹಂಗಾಮಿಗೆ ನೀರನ್ನು ಒದಗಿಸಲು ಸಾಧ್ಯವಾಗುವುದಿಲ್ಲವೆಂದು ನಿರ್ಣಯಿಸಲಾಗಿರುತ್ತದೆ. |

**ಜಸಂಇ 182 ಎಂಎಲ್‌ಎ 2025**

**(ಡಿ.ಕೆ.ಶಿವಕುಮಾರ್)**
**ಉಪ ಮುಖ್ಯಮಂತ್ರಿ**